ರಾಯ್ಕರ್ ಎಂಬ ಆರೋಗ್ಯ ಅಧಿಕಾರಿಯನ್ನು ಅಲ್ಲಿಗೆ ನೇಮಕ ಮಾಡಿದ್ದಾರೆ. ಅವರಿಗೆ ಯಾವುದೇ ಅನುಭವವಿಲ್ಲ, ಅವರಿಗೆ ಅರ್ಹತೆ ಇಲ್ಲ, ಸೀನಿಯಾರಿಟಿಯೂ ಸಹ ಇಲ್ಲ, ಇವತ್ತು ಇಡೀ ಮಹಾನಗರಸಭೆಯಲ್ಲಿ ಎಲ್ಲಾ ಪಾರ್ಟಿಯವರಿಗೆ ತಿಳಿದಂತೆ ಇದರ ಬಗ್ಗೆ ಅವಿರೋಧವಾಗಿ ಒಂದು ರೆಸೂಲ್ಯೂಷನ್‌ನ್ನು ಪಾಸ್ ಮಾಡಿದ್ದಾರೆ. ಈ ಸದನದಲ್ಲಿ ಡಾ|| ಮಲಕರೆಡ್ಡಿಯವರು ಇಲ್ಲೇ ಇದ್ದಾರೆ, ಶ್ರೀ ಹೀರಾ ರಾಯ್ಕರ್ ಎಂಬುವವರನ್ನು ಮೆಡಿಕಲ್ ಅಫೀಸರ್ ಎಂದು ಪೋಸ್ಟಿಂಗ್ ಮಾಡಿದ್ದಾರೆ.

ಅಧ್ಯಕ್ಷರು : ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಇದು ಬೆಂಗಳೂರು ನಗರಸಭೆಯ ವಿಚಾರದ ಬಗ್ಗೆ ಇದ್ದರೆ ನೀವು ಪ್ರಸ್ತಾಪ ಮಾಡಿ, ಅವರಿಂದ ಉತ್ತರವನ್ನು ತೆಗೆದುಕೊಳ್ಳಿ, ಬೇರೆಯವರಿಗೆ ಕ್ಲಾರಿಫೀಕೇಷನ್‌ನ್ನು ಕೇಳುವುದಕ್ಕೆ ಹೋದರೆ ಅದಕ್ಕೆ ಕೊನೆ ಮೊದಲಿಲ್ಲದಂತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ನಾನು ಕ್ಲಾರಿಫಿಕೇಶಷನ್‌ನ್ನು ಕೇಳುವುದಿಲ್ಲ, ಇದನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಈ ಎರಡಕ್ಕೂ ನಾಳೆ ದಿವಸ ಉತ್ತರವನ್ನು ಕೊಡಬೇಕು.

ರಾಯಚೂರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಟಿಎಪಿಎಂಎಸ್ ಕಾರ್ಯಚಟುವಟಿಕೆಗಳ ಬಗ್ಗೆ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ರೈತ ಸಂಘಟನೆಗಳವರು ಪ್ರತಿಭಟನೆ ಮಾಡುತ್ತಿರುವುದು.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಒಂದು ವಿಚಾರವನ್ನು ನಾವು ಪ್ರಸ್ತಾವ ಮಾಡಿದ್ದೇವೆ. ಮಾನ್ಯ ಧರ್ಮಸಿಂಗ್‌ರವರು ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದಾರೆ. ಇಡೀ ರಾಜ್ಯದಲ್ಲಿ ತಮಗೆ ಗೊತ್ತಿರುವಹಾಗೆ ರೈತರ ಬೆಲೆ ಕುಸಿದಿರುವುದು ತಮ್ಮ ಗಮನದಲ್ಲಿದೆ. ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದು ಹೇಳಿದರೂ ಸಹ ರೈತರಿಗೆ ಅದರ ಅನುಕೂಲ ಇನ್ನೂ ತಲುಪಿಲ್ಲ. ಆದ್ದರಿಂದ ಸ್ವಾಭಾವಿಕವಾಗಿ ಎಲ್ಲ ರಾಜಕೀಯ ಪಕ್ಷಗಳ ಮುಖಂಡರು, ರೈತ ಸಂಘಟನೆಗಳವರು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ನಮ್ಮ ಪಕ್ಷದ ವತಿಯಿಂದ ರಾಯಚೂರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಟಿಎಪಿಎಂಎಸ್ ಕಾರ್ಯ ಚಟುವಟಿಕೆಗಳ ಬಗ್ಗೆ ಒಂದು ಪ್ರತಿಭಟನೆಯನ್ನು ಮಾಡುತ್ತಿರುವ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಗೃಹಮಂತ್ರಿಗಳು ಸದನಕ್ಕೆ ತಮ್ಮ ಮೂಲಕ ಒಂದು ಭರವಸೆಯನ್ನು ಕೊಟ್ಟಿದ್ದು, ಆ ಕೇಸುಗಳನ್ನು ಪರಿಶೀಲನೆ ಮಾಡುತ್ತೇನೆ, ಅನ್ಯಾಯವಾಗಿ ಏನಾದರೂ ಕೇಸುಗಳನ್ನು ಹಾಕಿದ್ದರೆ ವಾಪಸ್ಸು ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಅಲ್ಲಿಗೆ ನಮಗೆ ಸಮಾಧಾನವಾಗಿತ್ತು. ಮಾನ್ಯ ಅಮರೇಗೌಡ ಬಯ್ಯಾಪುರ ರವರು ಹಾಗೂ ಮಾನ್ಯ ಹಂಪನಗೌಡ ಬಾದರ್ಲಿಯವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಮೀನ್ ಟೈಮ್ ನಿನ್ನೆ ಏನಾಗಿದೆ, ಅಂದರೆ ಕೆಲವರು ಹೋಗಿ ಶಾಮಿಯಾನ ಕಿತ್ತುಹಾಕತಕ್ಕದ್ದು, ಅಲ್ಲಿರತಕ್ಕವರನ್ನು ಬೆದರಿಸತಕ್ಕದ್ದು, ಧರಣಿಯನ್ನು ನೀವು ತಕ್ಷಣ ನಿಲ್ಲಿಸಬೇಕೆಂದು ಒತ್ತಾಯ ಮಾಡತಕ್ಕದ್ದು, ಇದೆಲ್ಲವನ್ನು ನೋಡಿಕೊಂಡು ಪೋಲೀಸ್‌ನವರು ನಿಷ್ಕ್ರೀಯರಾಗಿರುವುದು, ಇಷ್ಟೆಲ್ಲ ನಡೆಯುತ್ತಿದ್ದರೂ ಏನೂ

ನಡೆದಿಲ್ಲವೆನ್ನುವಂತೆ ಪೋಲೀಸರು ವರ್ತನೆ ಮಾಡತಕ್ಕದ್ದು ಇದೆಲ್ಲದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ರೈತರು ಬಹಳ ಕಂಗಾಲಾಗಿದ್ದಾರೆ. ತಾವು ಒಂದು ಭರವಸೆಯನ್ನು ಕೊಡಬೇಕು, ಕಳೆದ ವರ್ಷ ಇದೇ ಸಂದರ್ಭದಲ್ಲಿ ನವೆಂಬರ್ 15 ತಾರೀಖು ಭತ್ತದ ಬೆಲೆ ಏನಿತ್ತು, ಆ ಬೆಲೆಗೆ ರೈತರು ಕೊಡತಕ್ಕ ಭತ್ತವನ್ನು ಕೊಳ್ಳತಕ್ಕ ಕೆಲಸವನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ತಾವು ಕೊಡಿ. ಎಫ್‌ಸಿಐನವರು ಬೇರೆ ಬೇರೆ ಕಾರಣಗಳನ್ನು ಕೊಟ್ಟು ಭತ್ತವನ್ನು ಕೊಳ್ಳುತ್ತಿಲ್ಲ, ಅದನ್ನು ನಿಲ್ಲಿಸುತ್ತಿದ್ದಾರೆ. ಮತ್ತು ಯಾರು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಸಂಬಂಧಪಟ್ಟ ಮಾನ್ಯ ಸದಸ್ಯರು ಒಂದು ನಿಮಿಷ ಸದನಕ್ಕೆ ಕೆಲವು ಮಾಹಿತಿಗಳನ್ನು ಕೊಡುವವರು ಇದ್ದಾರೆ, ಅವರಿಗೆ ಮಾತನಾಡಲು ಅವಕಾಶ ಕೊಡಿ. ಜಿಲ್ಲಾಮಂತ್ರಿಗಳಾದ ಧರ್ಮಸಿಂಗ್‌ರವರು ಇಲ್ಲಿದ್ದಾರೆ, ಗೃಹಮಂತ್ರಿಗಳು ಏನು ಭರವಸೆಯನ್ನು ಕೊಟ್ಟಿದ್ದಾರೆ, ಅವರು ಕೆಲಸಗಳ ಒತ್ತಡದಿಂದ ಈ ಕಡೆಗೆ ಗಮನ ಕೊಡುವುದಕ್ಕೆ ಆಗಿಲ್ಲವೋ ಏನೋ ಗೊತ್ತಿಲ್ಲ. ತುರ್ತಾಗಿ ಸರ್ಕಾರ ರೈತರ ಸಹಾಯ ಸಹಕಾರಕ್ಕೆ ಬರಬೇಕು, ಆ ರೀತಿಯ ಮೊಕದ್ದಮೆಗಳನ್ನು ಏನು ಹಾಕಿದ್ದಾರೆ ಅವುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಪ್ರತಿಭಟನೆಯನ್ನು ಮಾಡತಕ್ಕ ರೈತರು ಜನರ ಮೇಲೆ ಯಾವುದೇ ಕಾರಣದಿಂದ ದಬ್ಬಾಳಿಕೆ ಮಾಡುವುದನ್ನು ಈ ಕೂಡಲೇ ನಿಲ್ಲಿಸಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

+ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಲಿಂಗಸೂಗೂರು) : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಪರ್ಟಿಕ್ಯುಲರ್ಲಿ ನಮ್ಮ ಪಕ್ಷದ ಕಾರ್ಯಕರ್ತರನ್ನು ಪೋಲೀಸರ ಮುಖಾಂತರ ಹಿಡಿದು ತರಿಸಿ, ಅವರ ಮನೆಗೆ ಹೋಗಿ ರಾತ್ರಿ 12 ಗಂಟೆಗೆ ಅರೆಸ್ಟ್ ಮಾಡಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಈ ಬಗ್ಗೆ ನಾನು ನಿನ್ನೆ ಸಹ ಹೇಳಿದ್ದೇನೆ. ಪುನಃ ಇವತ್ತು ಬೆಳಿಗ್ಗೆ ಮತ್ತೆ ಆರು ಜನರನ್ನು ಅರೆಸ್ಟ್ ಮಾಡತಕ್ಕ ಕೆಲಸ ಮಾಡಿ ಕಾರ್ಯಕರ್ತರಿಗೆ ಬೆದರಿಕೆ ಹಾಕತಕ್ಕ ಕೆಲಸವನ್ನು ಪೋಲೀಸರ ಮುಖಾಂತರ ಮಾಡಿಸುತ್ತಿದ್ದಾರೆ. ಅದರಲ್ಲೂ ನಮ್ಮ ಪಕ್ಷದ ಕಾರ್ಯಕರ್ತರು ಮತ್ತು ಮುಖ್ಯವಾಗಿರತಕ್ಕ ಜನರು ಭಯದ ವಾತಾವರಣದಲ್ಲಿ ಮಾರ್ಕೆಟ್‌ಗೆ ಬರತಕ್ಕ ಕೆಲಸ ನಡೆದಿದೆ. ಪೋಲೀಸರ ಈ ಒಂದು ವರ್ತನೆಯನ್ನು ನಿನ್ನೆ ಕೂಡ ಖಂಡಿಸಿದ್ದೇನೆ. ಇವತ್ತು ಖಂಡಿಸುತ್ತಿದ್ದೇನೆ. ನಿನ್ನೆ ಈ ವಿಷಯವನ್ನು ಹೇಳಿದಾಗ ಮಾನ್ಯ ಗೃಹಮಂತ್ರಿಗಳು ನಿನ್ನೆಯೇ ಇದನ್ನು ತಡೆಯಿಡಿಯುತ್ತೇನೆಂದು ಹೇಳಿದ್ದರು. ನಿನ್ನೆ ತಡೆಹಿಡಿಯತಕ್ಕ ಕೆಲಸ ಆಗಬೇಕಾಗಿತ್ತು. ನಿನ್ನೆ 100-150 ಜನರ ಮೇಲೆ ಎಫ್‌ಐಆರ್ ಕೇಸ್ ಹಾಕತಕ್ಕ ಕೆಲಸವನ್ನು ಮಾಡಿ, ಇನ್ನು 150 ಜನರನ್ನು ಅರೆಸ್ಟ್ ಮಾಡಿ ಎಫ್‌ಐಆರ್ ಹಾಕತಕ್ಕ ಕೆಲಸವನ್ನು ಮುಂದುರಿಸಿದ್ದಾರೆ. ಎಫ್‌ಐಆರ್‌ನಲ್ಲಿ ಅವರ ಹೆಸರು ಇಲ್ಲದಿದ್ದರೂ 150 ಜನ ಅಂತ ಹೇಳಿ ನಮ್ಮ ಪಕ್ಷದ ಕಾರ್ಯಕರ್ತರನ್ನು, ಕಾಂಗ್ರೆಸ್ ಕಾರ್ಯಕರ್ತರು ಯಾರ್ಯಾರ ಹೆಸರನ್ನು ಹೇಳುತ್ತಾರೆ ಅವರನ್ನು ಹಿಡಿಯತಕ್ಕ ಕೆಲಸ ಮುಂದುವರಿಯುತ್ತಿದೆ. ಈಗ ನಾನು ಪೋಲೀಸ್ ವರಿಷ್ಠಾಧಿಕಾರಿಗಳ ಜೊತೆ ಮಾತನಾಡಿದಾಗ, ಅವರು ಏನು ಹೇಳುತ್ತಾರೆಂದರೆ, ಇನ್ನೂ ಕೆಲವು ಜನರನ್ನು ಅರೆಸ್ಟ್ ಮಾಡಬೇಕೆಂದು ಹೇಳುತ್ತಾರೆ. ಎಫ್‌ಐಆರ್‌ನಲ್ಲಿ ಹೆಸರು ತೋರಿಸಿದ್ದರೆ ಅವರನ್ನು ಕರೆದುಕೊಂಡು ಹೋಗಿಯೆಂದು ನಾವೇ ಹೇಳುತ್ತಿದ್ದೆವು. ಆದರೆ ಇವತ್ತು 150 ಜನ ಎಂದು ಹೇಳಿ ಯಾರು ಬೇಕೋ ಅವರನ್ನು ಉದ್ದೇಶಪೂರ್ವಕವಾಗಿ ಅರೆಸ್ಟ್ ಮಾಡತಕ್ಕ ಕೆಲಸವನ್ನು ಮತ್ತು ಕೇಸುಗಳನ್ನು ಹಾಕತಕ್ಕ

ಕೆಲಸವನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಮತ್ತು ಅಮರೇಗೌಡ ಬಯ್ಯಾಪುರ್‌ರವರು ಹೇಳಿದಹಾಗೆ ರಾಯಚೂರಿನಲ್ಲಿ ನಡೆದ ಘಟನೆಯ ಬಗ್ಗೆ ನಾನು ಸ್ಟೇಟ್‌ಮೆಂಟ್‌ನ್ನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಎಪಿಎಂಸಿಯವರು ಅಥವಾ ಬೇರೆಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇದರಲ್ಲಿ ಇಂತಹವರು ಇದ್ದಾರೆ, ಅವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದೂ, ಇಂತಹವರನ್ನು ಮಿದ್ದಾಗಿ ಅರೆಸ್ಟ್ ಮಾಡಿ, ಭಯದ ವಾತಾವರಣ ಉಂಟು ಮಾಡುವಂತಹದ್ದು ಈ ಬಗ್ಗೆ ಪತ್ರಿಕೆಯಲ್ಲಿ ಬಂದಿರತಕ್ಕ ಸ್ಟೇಟ್‌ಮೆಂಟ್ ನೋಡಿದ್ದೇನೆ. ಮಾನ್ಯ ಅಮರೇಗೌಡ ಬಯ್ಯಾಪುರ್‌ರವರು ಹೇಳಿದಹಾಗೆ, ಇಲ್ಲಿ ಇದು ಅವರ ರಾಜಕೀಯ ಸೇಡಿನ ಮನೋಭಾವನೆಯನ್ನು ತೋರಿಸುತ್ತಿದೆ. ರೈತರು ಮಾರುಕಟ್ಟೆಗೆ ತಮ್ಮ ಉತ್ಪನ್ನಗಳನ್ನು ತೆಗೆದುಕೊಂಡು ಬಂದು ಮಾರಾಟ ಮಾಡುವಂತಹ ಸಂದರ್ಭದಲ್ಲಿ, ಅಲ್ಲಿ ಹೋರಾಟ ಮಾಡುವಂತಹ ಸಂದರ್ಭದಲ್ಲಿ ಏನೋ ಒಂದು ಸಂಘರ್ಷವಾಗಿ ಮುದ್ದಾಂ ನಡೆಯುವಂತಹ ಘಟನೆಗಳು ಅಲ್ಲಿ ಸ್ಫೋಟವಾಗುತ್ತವೆ, ಈ ರೀತಿಯಾದ ಸಂದರ್ಭದಲ್ಲಿ ಒಂದು ಸೇಡಿನ ಮನೋಭಾವನೆಯನ್ನು ಇಟ್ಟುಕೊಂಡು ಎಫ್‌ಐಆರ್‌ನಲ್ಲಿ ಹೆಸರು ಸೇರಿಸುತ್ತಾರೆ. ಅದು ಒಂದು ಕಡೆ ನಡೆಯುವಂತಹದ್ದು. ನಾಲ್ಕೈದು ಜನರ ಹೆಸರನ್ನು ಹಾಕಿ ಜೊತೆಗೆ 150 ಜನ ಇವರು ಇದ್ದಾರೆಂದು, ಬರೀ 150 ಜನ ಅಲ್ಲ 200 ರಿಂದ 500 ಜನರನ್ನು ಅರೆಸ್ಟ್ ಮಾಡುವಂತಹ ಎಫ್‌ಐಆರ್ ಲಿಸ್ಟನಲ್ಲಿ ನೀವು ಇದ್ದೀರಿ ಎನ್ನುವಂತಹ ಪೋಲೀಸರ ಮೂಲಕ ದಬ್ಬಾಳಿಕೆಯನ್ನು ಮಾಡುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಇದು ರಾಯಚೂರಿನಲ್ಲಿ ಆಗಿದೆ. ನನಗೆ ಅಲ್ಲಿಂದ ಸಾಕಷ್ಟು ಫೋನ್‌ಗಳು ಬಂದಿತ್ತು. ರಾಯಚೂರಿನಲ್ಲಿ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಇವತ್ತು ಯಾರು ಮುಗ್ದರು ಇದ್ದಾರೆ ಅವರನ್ನು ತಕ್ಷಣ ಬಿಡುಗಡೆ ಮಾಡುವಂತಹ ಕೆಲಸವಾಗಬೇಕು. ರೈತರು ಹೋರಾಟ ಮಾಡುವಾಗ ಜನತಾದಳದವರು ಇರಬಹುದು, ಯಾರೇ ಇರಬಹುದು ಜನತಾದಳ ಪಕ್ಷದವರು ನೇತೃತ್ವ ವಹಿಸಿರಬಹುದು. ಆದರೆ ರೈತರ ಹೋರಾಟಕ್ಕೆ, ರೈತರ ಭಾವನೆಗಳಿಗೆ ಗೌರವ ಕೊಡುವ ಕೆಲಸವಾಗಬೇಕು. ಮೊದಲು ಅವರ ಬೇಡಿಕೆಗಳನ್ನು ಈಡೇರಿಸಿ. ಅವರ ಬೇಡಿಕೆಗಳನ್ನು ಈಡೇರಿಸಿದರೆ ಈ ರೀತಿಯ ಸಂಘರ್ಷಗಳು ಆಗುವುದಕ್ಕೆ ಸಾಧ್ಯವಿಲ್ಲ. ರೈತರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬದಲಾಗಿ ಒಂದು ರಾಜಕೀಯ ಸೇಡಿನ ಮನೋಭಾವನೆಯಿಂದ ಒಂದು ರಾಜಕೀಯ ಪಕ್ಷದವರನ್ನು, ಆ ಪಕ್ಷದ ಕಾರ್ಯಕರ್ತರನ್ನು ದಮನ ಮಾಡುವಂತಹ ನೀತಿ ಏನಿದೆ ಅದು ಆಗಬಾರದು. ಈ ತಕ್ಷಣ ಮಾನ್ಯ ಗೃಹಮಂತ್ರಿಗಳು ಇತ್ತಕಡೆ ಗಮನಹರಿಸಿ ಯಾರು ಮುಗ್ದರಿದ್ದಾರೆ ಅವರ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು, ಅವರನ್ನೆಲ್ಲಾ ಅರೆಸ್ಟ್ ಮಾಡತಕ್ಕ ಕೆಲಸ ನಿಲ್ಲಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಹಲವಾರು ಮಿತ್ರರು ರಾಯಚೂರಿನಲ್ಲಿ ರೈತರಿಗೆ ಸಮಸ್ಯೆಯುಂಟಾಗಿದೆ, ಅದರ ಬಗ್ಗೆ ಚಿಂತನೆಯಾಗಬೇಕಾಗಿದೆಯೆಂದು ಅಲ್ಲಿ

ನಡೆದಿರತಕ್ಕ ಘಟನೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ನಿನ್ನೆ ನಮ್ಮ ರಾಯಚೂರಿನಲ್ಲಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ನಡೆದಂತಹ ಘಟನೆಗಳ ಬಗ್ಗೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಘಟನೆ ನಡೆದಂತಹ ಸ್ಥಳದಲ್ಲಿ ನಮ್ಮ ಪಕ್ಷದ ಮುಖಂಡರು ಸ್ಥಳದಲ್ಲಿ ಇಲ್ಲದಿದ್ದರೂ ಅವರ ಮೇಲೆ ಕೇಸುಗಳನ್ನು ಮಾಡಿ ಅವರ ಮನೆಗಳಿಗೆ ಹೋಗಿ ರಾತ್ರಿ 12 ಗಂಟೆಯಲ್ಲಿ ಅರೆಸ್ಟ್ ಮಾಡಿರುವುದು ತಮ್ಮ ಗಮನಕ್ಕೆ ನಿನ್ನೆ ಬಂದಿದೆ. ನಿನ್ನೆ ಮಾನ್ಯ ಗೃಹ ಮಂತ್ರಿಗಳು ಆ ತರಹ ಏನಾದರೂ ಇದ್ದರೆ ಅದನ್ನು ಪರಿಶೀಲನೆ ಮಾಡಿ ಸರಿಪಡಿಸುತ್ತೇನೆಂದು ಹೇಳಿದರು. ಪುನಃ ಇವತ್ತು ಕೂಡ ಆ ಪರಿವರ್ತನೆ ರಾಯಚೂರಿನಲ್ಲಿ ಉದ್ಭವವಾಗಿದೆ. ರೈತರು ಮೊದಲೇ ಕಂಗಾಲಾಗಿದ್ದಾರೆ. ಅಲ್ಲಿ ಪರಿಸ್ಥಿತಿ ಹತೋಟಿ ಮೀರಿ ಹೋಗುವ ವಾತಾವರಣ ಕಂಡು ಬಂದಿರುವುದರಿಂದ, ಜಿಲ್ಲಾ ಉಸ್ತುವಾರಿ ಸಚಿವರು ಸದನದಲ್ಲಿರುವುದರಿಂದ ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಕೂಡ ಶಾಂತ ರೀತಿಯಿಂದ ಕಳೆದ ನಾಲ್ಕು ದಿವಸಗಳಿಂದ ಪ್ರತಿನಿತ್ಯ ಸಾವಿರಾರು ರೈತರು ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ತಹಶೀಲ್ದಾರ್ ಕಛೇರಿಯ ಎದುರುಗಡೆ ಸಾವಿರಾರು ರೈತರು ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅಲ್ಲಿಗೆ ಭೇಟಿ ನೀಡಿ ಅಲ್ಲಿರತಕ್ಕ ವಾತಾವರಣ ಏನಿದೆ ಅದನ್ನು ತಿಳಿ ವಾತಾವರಣ ಉಂಟು ಮಾಡಬೇಕು. ಭತ್ತ ಖರೀದಿ ವಿಚಾರದಲ್ಲಿ ನಮ್ಮ ತಾಲ್ಲೂಕಿನಲ್ಲಿ ರೈತರು ಎಲ್ಲಾ ಪಕ್ಷಗಳವರು ಸೇರಿ ಒಂದು ಹೋರಾಟ ಸಮಿತಿಯನ್ನು ರಚನೆ ಮಾಡಿಕೊಂಡಿದ್ದಾರೆ. ತಮಗೂ ಕೂಡ ಪತ್ರವನ್ನು ಕಳುಹಿಸಿದ್ದಾರೆ. ತಾವು ದಯವಿಟ್ಟು ಇತರ ಕಡೆಗೆ ಗಮನಹರಿಸಿ ಪರಿಹಾರ ಮಾಡುವ ಕೆಲಸ ಸರ್ಕಾರದಿಂದ ಆಗಬೇಕು. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಅಲ್ಲಿ ಪರಿಶೀಲನೆ ಮಾಡಿ ಏನು ಸಮಸ್ಯೆ ಉದ್ಭವವಾಗಿದೆ, ಆ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಕೆಲಸವನ್ನು ಜಿಲ್ಲಾ ಉಸ್ತುವಾರಿ ಸಚಿವರು ಮಾಡಲಿಯೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಎಸ್. ಬೋಸ್‌ರಾಜ್ (ಮಾನ್ವಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರುಗಳು ಹಾಗೂ ನಮ್ಮ ಹಂಪನಗೌಡರು ಹೇಳಿದಹಾಗೆ ಅನೇಕ ಜಿಲ್ಲೆಗಳಲ್ಲಿ ಅನೇಕ ಸ್ಥಳಗಳಲ್ಲಿ ಹೀಗಾಗಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಇಡೀ ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ನಮ್ಮ ಆಹಾರ ಮಂತ್ರಿಗಳು ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದಾರೆ. ಸರ್ಕಾರ ಈಗಾಗಲೇ 100 ಕೋಟಿ ರೂಪಾಯಿಗಳನ್ನು ರೈತರ ಬೆಳೆ ಖರೀದಿ ಮಾಡುವುದಕ್ಕೆ ನಿಗದಿಪಡಿಸಿರುವುದು ಮಾನ್ಯ ಹಂಪನಗೌಡರಿಗೆ ಗೊತ್ತಿದೆ. ಈ ರೀತಿಯ ಪ್ರಯತ್ನ ನಡೆದಂತಹ ಸಂದರ್ಭದಲ್ಲಿ ರಾಯಚೂರಿನಲ್ಲಿ ರಾಜಕೀಯವಾಗಿ ಸೇಡು ತೀರಿಸಿಕೊಳ್ಳತಕ್ಕ ಕಾರ್ಯಕ್ರಮವನ್ನು ಕೆಲವರು ಮಾಡುತ್ತಿದ್ದಾರೆ ಎಂದು ಬೇರೆಯವರ ಮೇಲೆ ಗೂಬೆ ಕೂರಿಸುವಂತಹ ಪ್ರಯತ್ನ ಅಲ್ಲಿ ಏನು ನಡೆಯುತ್ತಿದೆ ಇದು ಸರಿಯಲ್ಲ. ಯಾವುದೇ ಒಂದು ವಿರೋಧಪಕ್ಷದವರು ಎಪಿಎಂಸಿ ಮುಂದುಗಡೆ ಟೆಂಟ್ ಹಾಕಿ ಅಲ್ಲಿ ಅವರು ವಿರೋಧ ವ್ಯಕ್ತಪಡಿಸುವ ಸಂದರ್ಭದಲ್ಲಿ ಅಲ್ಲಿರತಕ್ಕ ಕೆಲವು ಮುಖಂಡರು ಹಮಾಲರನ್ನು ಕರೆದುಕೊಂಡು ಎಪಿಎಂಸಿ ಅಫೀಸಿಗೆ ಪ್ರವೇಶ ಮಾಡಿ ಅಲ್ಲಿನ, ಒಂದು ಅಂದಾಜಿನ ಪ್ರಕಾರ ಐದಾರು ಲಕ್ಷ ರೂಪಾಯಿಗಳ ಪೀಠೋಪಕರಣಗಳನ್ನು ಧ್ವಂಸ ಮಾಡಿರುವುದರಿಂದ ಪೋಲೀಸರು ತಮ್ಮ ಜವಾಬ್ದಾರಿ ಪ್ರಕಾರ ಏನು ಮಾಡಬೇಕೋ ಆ ರೀತಿ ಮಾಡಿರುವುದನ್ನು ಬಿಟ್ಟರೆ ರಾಜಕೀಯವಾಗಿ ಸೇಡು ತಿರಿಸಿಕೊಳ್ಳುವ ಕೆಲಸವನ್ನು ನಮ್ಮ ಪಕ್ಷದವರು ಯಾರೂ ಮಾಡಿಲ್ಲ.

1.30 ಪಿಎಂ

ಹೀಗೆ ಯಾರಾದರೂ ಮಾತನಾಡುವುದು ಸರಿಯಲ್ಲ. ಏಕೆಂದರೆ ನನ್ನ ಮಾನ್ಯ ಕ್ಷೇತ್ರದಲ್ಲಿ, ಸಿಂಧನೂರು ಕ್ಷೇತ್ರದಲ್ಲಿ, ಸಿಂಧನೂರು ಕ್ಷೇತ್ರದಲ್ಲಿ, ಗಂಗಾವತಿ, ಕೊಪ್ಪಳ ಈ ಎಲ್ಲಾ ಕಡೆ ಸಹಿತ ಈ ಪರಿಸ್ಥಿತಿ ಉದ್ಭವಿಸಿರುವುದರಿಂದ ಈಗ ಎಲ್ಲ ಪಕ್ಷದವರೂ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಸಂಬಂಧಪಟ್ಟ ಮಂತ್ರಿಗಳಿಗೆ ಸಹ ಎಲ್ಲರೂ ಒತ್ತಾಯ ಮಾಡಿದ್ದೆವು. ಅವರು ಇವತ್ತು ಡೆಲ್ಲಿಗೆ ಹೋಗಿದ್ದಾರೆ. ಏನು ಪಂಜಾಬ್‌ನಲ್ಲಿ ಕೇಂದ್ರಸರ್ಕಾರದಿಂದ ಅವರಿಗೆ ರಿಯಾಯ್ತಿ ಕೊಟ್ಟಿದೆ, ಅದನ್ನು ಪ್ರಯತ್ನ ಮಾಡಿ ನಮ್ಮ ರಾಜ್ಯಕ್ಕೆ ತರಬೇಕೆಂಬ ಉದ್ದೇಶದಿಂದ ಅವರು ಹೋಗಿದ್ದಾರೆ. ಬೆಳ್ಳಿಗೆ ಸಹಿತ ನಾವು ಮಾನ್ಯ ಮಂತ್ರಿಗಳಾದ ಇನಾಮ್‌ದಾರ್ ರವರ ಹತ್ತಿರ ಮಾತನಾಡಿದ್ದೇವೆ. ಈಗತಾನೆ ಬಳ್ಳಾರಿಯ ಎಂ.ಪಿ.ಗಳು ಮತ್ತು ನಾವು ಮಾನ್ಯ ಮುಖ್ಯಮಂತ್ರಿಗಳ ಜತೆ ಮಾತನಾಡಿದ್ದೇವೆ. ಈ ವಿಷಯದಲ್ಲಿ ಎಲ್ಲರಿಗೂ ಕಳಕಳಿ ಇದೆ. ಆದರೆ ಅಲ್ಲಿರತರಕ್ಕಂಥ ಪರಿಸ್ಥಿತಿ ಬಗ್ಗೆ ವಿರೋಧಪಕ್ಷದವರು ಇರಬಹುದು, ಆಡಳಿತ ಪಕ್ಷದವರು ಇರಬಹುದು, ಯಾವುದೇ ಪಕ್ಷದವರು ಇರಲಿ, ಅದು ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಇರುವಾಗ ರೈತರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಪ್ರಯತ್ನ ಮಾಡಬೇಕೇ ಹೊರತು, ಅದು ಬಿಟ್ಟು ಕೇವಲ ರಾಜಕೀಯ ಮಾಡುವುದಕ್ಕೆ ಕೆಲವು ಮಂದಿ ಹೊರಟಿದ್ದಾರೆ. ಇದರಿಂದ ಅಫೀಸಿನಲ್ಲಿರತಕ್ಕಂಥ ಪರಿಸ್ಥಿತಿಯನ್ನು ಧ್ವಂಸ ಮಾಡುವಂಥ ಅವಸರ ಏನೂ ಇರಲಿಲ್ಲ. ಹಾಗಾಗಿ ಅದರ ಬಗ್ಗೆ ಕೇಸು ಮಾಡಿರತಕ್ಕದ್ದು ಪೋಲೀಸರಿಗೆ ಸಂಬಂಧಪಟ್ಟಿರತಕ್ಕಂಥಾದ್ದು. ಅದು ಅಲ್ಲಿ ಆಗಿರತಕ್ಕದ್ದು. ಅದುಬಿಟ್ಟು ರೈತರ ಮೇಲೆ ದ್ವೇಷ, ಸಿಟ್ಟು ತೀರಿಸಿಕೊಳ್ಳಲಿಕ್ಕೆ ಇದನ್ನು ಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ಮಾನ್ಯ ಹಂಪನಗೌಡರೇ, ತಾವು ಮಾತನಾಡುವಾಗ ಯಾರೂ ಮಾತನಾಡಿಲ್ಲ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು : ಇದರಲ್ಲಿ ರಾಜಕೀಯ ಏನಿದೆ ? ರೈತರಿಗೆ ಬೆಂಬಲ ಬೆಲೆ ಸಿಕ್ಕಿಲ್ಲವೆಂದು ಹೋರಾಟ ಮಾಡುತ್ತಿದ್ದಾರೆ. ಅದರ ಬಗ್ಗೆ ನೀವೇನೂ ಉತ್ತರ ಹೇಳುತ್ತಿಲ್ಲ. ರೈತರಿಗೆ ಲಾಠಿ ಏಟು ಸಿಗುತ್ತಿದೆ.....

(ಗೊಂದಲ)

ಅಧ್ಯಕ್ಷರು : ಮೂರು-ನಾಲ್ಕು ಜನರು ಮಾತನಾಡಿದರೆ ವರದಿಯನ್ನು ತೆಗೆದುಕೊಳ್ಳಬೇಡಿ. ಯಾರಾದರೂ ಒಬ್ಬರು ಮಾತನಾಡಿದರೆ ವರದಿ ತೆಗೆದುಕೊಳ್ಳಿ ಅಷ್ಟೆ.

(ಗೊಂದಲ)

ಅಧ್ಯಕ್ಷರು : ಆಯಿತು. ಮಾನ್ಯ ಮಂತ್ರಿಯವರೇ, ತಾವು ಉತ್ತರ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಸದನದ ನಿಯಮ69ರ ಅಡಿಯಲ್ಲಿ ಬೆಲೆ ಕುಸಿತದ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮಗಳ ಬಗ್ಗೆ, ಕೇಂದ್ರ ಸರ್ಕಾರ ಸಹಕಾರ ಕೊಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಆದ್ದರಿಂದ ನಾವು ಬಯಸತಕ್ಕದ್ದು ಏನೆಂದರೆ ಅಲ್ಲಿ ರೈತರ ಪರವಾಗಿ ಪ್ರತಿಭಟನೆ ಮಾಡುತ್ತಾ ಇರತಕ್ಕಂಥ ಜನಗಳ ಮೇಲೆ ಪೊಲೀಸರಿಂದ ದಬ್ಬಾಳಿಕೆಯಾಗುತ್ತಿದೆ, ದೌರ್ಜನ್ಯವಾಗುತ್ತಿದೆ, ಹಿಂಸಾಚಾರವಾಗುತ್ತಿದೆ. ಹೀಗೆ ದಬ್ಬಾಳಿಕೆ ನಡೆದಂಥ ಸಂದರ್ಭದಲ್ಲಿ ಪೋಲೀಸರು ಮೂಕ ಪ್ರೇಕ್ಷಕರಂತೆ ನಿಂತಿದ್ದಾರೆ. ಅವರಿಗೆ ರಕ್ಷಣೆ ಸಿಗಬೇಕು, ಮಾನ್ಯ ಗೃಹಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾವೆಲ್ಲರೂ ಪ್ರಸ್ತಾಪ ಮಾಡಿದ್ದೆವು. ಅದರ ಬದಲಿಗೆ ದಬ್ಬಾಳಿಕೆ ಇನ್ನೂ ಹೆಚ್ಚಾಗುತ್ತಿದೆ. ಆದ್ದರಿಂದ ಅದು ಆಗದೇ ಇರುವ ಹಾಗೆ ನೋಡಿಕೊಳ್ಳುತ್ತೇವೆ ಎನ್ನುವಂಥ ಭರವಸೆಯನ್ನು ಮಾನ್ಯ ಮಂತ್ರಿಯವರು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ, ಸ್ವಾಮಿ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು, ಮಾನ್ಯ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ಮಾನ್ಯ ಅಮರೇಗೌಡ ಬಯ್ಯಪುರ್‌ರವರು ಮತ್ತು ಹಂಪನಗೌಡರೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಬೋಸರಾಜು ಅವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಏನು ಬೆಲೆ ಕುಸಿದು ಹೋಗುತ್ತಿದೆ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ, ಅಲ್ಲಿ ಪ್ರತಿಭಟನೆ ಮಾಡತಕ್ಕಂಥ ಕಾಲದಲ್ಲಿ ಸ್ವಲ್ಪ ಪೋಲೀಸ್ ದಬ್ಬಾಳಿಕೆ ಆಗಿದೆಯೆನ್ನುವ ಮಾತನ್ನು ಕೂಡ ತಂದಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗೃಹಮಂತ್ರಿಗಳಾಗಿದ್ದಾರೆ, ಅದರ ಬಗ್ಗೆ ಅವರಿಗೆ ನಾನು ಹೇಳುತ್ತೇನೆ ಎನ್ನತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದ್ದಾಯಿತು. ಈ ಜಿಲ್ಲಾ ಉಸ್ತುವಾರಿ ಸಚಿವನಾಗಿ ನನಗನ್ನಿಸುತ್ತದೆ, ಮಾನ್ಯ ಅಮರೇಗೌಡರು ಮತ್ತು ಮಾನ್ಯ ಹಂಪನಗೌಡರು ಯಾವತ್ತಾದರೂ ಬಂದು ನನ್ನನ್ನು ಭೇಟಿಯಾಗಬಹುದಿತ್ತು. ಏಕೆಂದರೆ ಬೇರೆ ಜಿಲ್ಲೆಯ ಪರಿಸ್ಥಿತಿ ರಾಯಚೂರು ಜಿಲ್ಲೆಯಲ್ಲಿ ಇಲ್ಲ. ನಾವು ಯಾವಾಗಲೂ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ ಎನ್ನತಕ್ಕಂಥ ಪ್ರಸ್ತಾಪವನ್ನು ಅವರು ಮಾಡಿದ್ದಾರೆ. ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿ ತಮಗೆ ಭರವಸೆ ಕೊಡುತ್ತಿದ್ದೇನೆ, ನಾನು ಮತ್ತೊಮ್ಮೆ ಖುದ್ದಾಗಿ ಎಸ್.ಪಿ. ಅವರ ಜೊತೆಗೆ ಸಮಾಲೋಚನೆ ಮಾಡುತ್ತೇನೆ ಮತ್ತು ಜಿಲ್ಲಾಧಿಕಾರಿಗಳಿಗೂ ಕೂಡ ಹೇಳುತ್ತೇನೆ. ನಮ್ಮ ಮಾನ್ಯ ಇನಾಮ್‌ದಾರರು ಕೂಡ ಅಲ್ಲಿಗೆ ಹೋಗಿದ್ದಾರೆ. ಈಗಾಗಲೇ the Government has also directed the RAPCMS, ರೈತರ ಬೆಳೆಯನ್ನು ಖರೀದಿ ಮಾಡಬೇಕೆಂದು ತೀರ್ಮಾನ ಆಗಿದೆ. ಇನ್ನೂ ಕೂಡ ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಿ ನಾಳೆ ಪುನಃ ಸಮಗ್ರವಾದ ಹೇಳಿಕೆಯನ್ನು ಕೊಡುತ್ತಾರೆ. ಆದರೆ ಪ್ರತಿಭಟನೆಕಾರರ ಮೇಲೆ ದಬ್ಬಾಳಿಕೆಯಾಗುತ್ತಿದೆ, ಪೋಲೀಸ್ ಕೇಸ್ ಮಾಡುತ್ತಾರೆ ಎನ್ನತಕ್ಕಂಥಾದ್ದು ತಮ್ಮ ಅನಿಸಿಕೆ ಏನಿದೆ. ಇದು ಯಾವುದೂ ಕೂಡ ರಾಜಕೀಯ ಪ್ರೇರೇಪಿತವಾಗಿ ಅಂತಹ ಕೆಲಸ ಆಗುವುದಿಲ್ಲ ಎನ್ನತಕ್ಕಂಥ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ : ಮಾನ್ಯ ಉಸ್ತುವಾರಿ ಸಚಿವರ ಮಾತಿಗೆ ನಮ್ಮ ಒಪ್ಪಿಗೆ ಇದೆ. ಈಗ ಅರೆಸ್ಟ್ ಮಾಡುವುದನ್ನು ಅಲ್ಲಿಗೇ ನಿಲ್ಲಿಸಿ ಮತ್ತು 150 ಮಂದಿಯನ್ನು ಏನು ಎಫ್.ಐ.ಆರ್. ನಲ್ಲಿ ಸೇರಿಸಿದ್ದಾರೆ, ಹಳ್ಳಿಹಳ್ಳಿಗೆ ಹುಡುಕಿಕೊಂಡು ಹೋಗಿ ಅವರನ್ನು ಅರೆಸ್ಟ್ ಮಾಡುವಂಥ ಕೆಲಸ ನಿನ್ನೆ ಕೂಡ ನಡೆದಿದೆ. ಇವತ್ತು ಬೆಳಿಗ್ಗೆ ಸಹ ಆಗಿದೆ ಮತ್ತು ಇದನ್ನು ಅವರು ಮತ್ತೆ ಮುಂದುವರೆಸುತ್ತಾರೆ. ಇದನ್ನು ನಿಲ್ಲಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್ : ಇವತ್ತೂ ಆಗುತ್ತಿದೆ ಎನ್ನತಕ್ಕಂಥಾದ್ದನ್ನು ಏನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಈ ಬಗ್ಗೆ ನಾನು ಮತ್ತೆ ಖುದ್ದಾಗಿ ಎಸ್.ಪಿ.ಯವರ ಜೊತೆ ಮಾತನಾಡುತ್ತೇನೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಬಾಗೇಪಲ್ಲಿಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಯುವಕನ ಸಾವು

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ನಿನ್ನೆ ಬಾಗೇಪಲ್ಲಿಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದಾಗಿ ಒಬ್ಬ 28 ವರ್ಷದ ಯುವಕ ಸಾವಿಗೀಡಾಗಿದ್ದಾನೆ ನಿನ್ನೆ ಬಾಗೇಪಲ್ಲಿಯಲ್ಲಿ ಆ ಯುವಕನ ಶವವನ್ನು ಇಟ್ಟುಕೊಂಡು ಆಸ್ಪತ್ರೆಯಲ್ಲಿ ರಾತ್ರಿಯೆಲ್ಲ ಮುಷ್ಕರವನ್ನು ಮಾಡಿದ್ದಾರೆ. ಅಲ್ಲಿ ಮುಷ್ಕರ ಮಾಡಿದಂಥ ಸಂದರ್ಭದಲ್ಲಿ ಜಿಲ್ಲೆಯ ಡಿ.ಹೆಚ್.ಓ. ಆಗಲೀ, ಅಥವಾ ಬೇರೆ ಉಸ್ತುವಾರಿ ಸಚಿವರಾಗಲೀ ಯಾರೂ ಬರಲಿಲ್ಲ. ಇದು ಅಲ್ಲಿಯ ಅಂಬೇಡ್ಕರ್ ನಗರದಲ್ಲಿರತಕ್ಕಂಥ ಒಬ್ಬ ವ್ಯಕ್ತಿ, 28 ವರ್ಷ ಪ್ರಾಯದ ಯುವಕ, ವಾಂತಿ ಮತ್ತು ಬೇಧಿಯಾದಾಗ, ಬೆಳಿಗ್ಗೆ ಆಸ್ಪತ್ರೆಗೆ ಹೋದಾಗ, ಆ ಡಾಕ್ಟರ್ ಏನು ಮಾಡಿದ್ದಾರೆ ಎಂದರೆ ಮನೆಯಲ್ಲೇ ಟ್ರೀಟ್‌ಮೆಂಟ್ ಕೊಡುವ ಪ್ರಯತ್ನ ಮಾಡಿದ್ದಾರೆ. ಮನೆಯಲ್ಲೇ ಟ್ರೀಟ್‌ಮೆಂಟ್ ಮಾಡಿ 230 ರೂಪಾಯಿಗಳನ್ನು ಆ ಡಾಕ್ಟರ್ ಕೇಳಿದ್ದಾರೆ. ಆದರೆ ಅವರ ಹತ್ತಿರ 230 ರೂಪಾಯಿ ಇಲ್ಲದಿರುವ ಪರಿಸ್ಥಿತಿಯಲ್ಲಿ ಇನ್ನೂರು ರೂಪಾಯಿ ಕೊಟ್ಟರೂ ಕೂಡ ಒಪ್ಪದೆ ಮೂವತ್ತು ರೂಪಾಯಿಗಳನ್ನು ತಂದುಕೊಡಿ, ಅದು ನನಗೆ ಸಿಗುವ ಕೂಲಿ ಎಂದು ಕೇಳಿದ್ದಾರೆ. ಆ ವೈದ್ಯರು ನಿರ್ಲಕ್ಷ್ಯ ತೋರಿಸಿ ಸುಮಾರು ಐದು ಗಂಟೆವರೆಗೆ ಕೂಡ ಪೇಶೆಂಟ್‌ನ್ನು ಅವರ ಮನೆಯಲ್ಲಿಟ್ಟುಕೊಂಡಿದ್ದಾರೆ. ಪಕ್ಕದ ಕಾಂಪೌಂಡ್‌ನಲ್ಲಿ50 ಹಾಸಿಗೆಗಳಿರುವ ಆಸ್ಪತ್ರೆ ಇದೆ. ಆದರೆ ಅಲ್ಲಿ ಡಾಕ್ಟರ್‌ಗಳು ಯಾರೂ ಇಲ್ಲ. ಯಾವ ವೈದ್ಯಕೀಯ ಸೌಲಭ್ಯಗಳೂ ಅಲ್ಲಿ ಇಲ್ಲ. ತಾಲ್ಲೂಕಿನಲ್ಲಿರತಕ್ಕಂಥ ಒಂದು ಆಸ್ಪತ್ರೆಯಲ್ಲಿ ಸುಮಾರು ವರ್ಷಗಳಿಂದ ವೈದ್ಯರು ಇಲ್ಲದೆ ಅಲ್ಲಿ ವೈದ್ಯಕೀಯ ತಪಾಸಣೆ ನಡೆಯುವಂತಿಲ್ಲ. ಅಲ್ಲಿ ಔಷದಿಗಳು ಕೂಡ ಸಿಗುತ್ತಿಲ್ಲ. ಇವತ್ತು ಒಬ್ಬ ಡಾಕ್ಟರ್ ಶ್ರೀ ಬಾಲಸುಬ್ರಹ್ಮಣ್ಯಂ ಎನ್ನುವವರು ತಮ್ಮ ಮನೆಯಲ್ಲೇ ವೈದ್ಯಕೀಯ ಸೌಲಭ್ಯ ಕೊಡುತ್ತೇನೆ ಎಂದು ಹೇಳಿ, ಇನ್ನೂರು ರೂಪಾಯಿ ತೆಗೆದುಕೊಂಡು ಹುಡುಗನಿಗೆ ಯಾವುದೇ ತರಹ ಟ್ರೀಟ್‌ಮೆಂಟ್ ಮಾಡದೆ, ಐದು ಗಂಟೆಯಲ್ಲಿ ಏನು ಮಾಡಿದ್ದಾರೆ ಎಂದರೆ, ಇದು ಬಹಳ ಸೀರಿಯಸ್ ಆಗಿದೆ, ಚಿಕ್ಕಬಳ್ಳಾಪುರಕ್ಕೆ ತೆಗೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಅದರಂತೆ ಅವರು ಚಿಕ್ಕಬಳ್ಳಾಪುರಕ್ಕೆ ಹೋದಾಗ ಗೇಟ್ ಹತ್ತಿರ ಬರುತ್ತಿದ್ದಾಹಾಗೆ ಅವನು ಸತ್ತುಹೋಗಿದ್ದಾನೆ. ಅಲ್ಲಿ ಅಂಬುಲೆನ್ಸ್ ಕೂಡ ಇದೆ. ಆದರೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಸುಮಾರು 2 ವರ್ಷಗಳ ಹಿಂದೆ ಐದಾರು ಲಕ್ಷ ರೂಪಾಯಿಗಳಿಗೆ